**ಸಿ.ಸಿ.ನಂ.: 1114/2024**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **17-04-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀ. ವಿ ಜಿ ಎನ್ ವಕೀಲರಿಂದ</u>**

1. ಈ ಪ್ರಕರಣದ ಕರಾರು ಪತ್ರ ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಕಂಪ್ಯೂಟರೀಕೃತ ಗೊಂಡಿದ್ದು ಅದನ್ನು ನಾವು ಪ್ರಿಂಟ್ ಹಾಕುತ್ತೇವೆ. ಸದ್ರಿ ದಾಖಲಾತಿಯನ್ನು ನಾವು ಪ್ರಿಂಟ್ ತೆಗೆದು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನಿಪಿ13 ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಕಂಪ್ಯೂಟರನಿಂದ ತೆಗೆದಂತಹ ಪ್ರತಿ ಆಗಿರುತ್ತದೆ. ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಆದ ಎಲ್ಲಾ ವ್ಯವಹಾರವು ನಮ್ಮ ಕಂಪ್ಯೂಟರಿನಲ್ಲಿ ನಮೂದು ಇರುತ್ತದೆ. ಆರೋಪಿತಳಿಗೆ ನಾವು ಆಕಸ್ಮಿಕ ಖರ್ಚಿಗಾಗಿ ಸಾಲವನ್ನು ನೀಡಿರುತ್ತೇವೆ ಎಂದರೆ ಸರಿ. ನಾವು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ನೀಡುವ ಬೇರೆ ಬೇರೆ ಸಾಲದ ಕುರಿತಾಗಿ ಅದರ ನಮೂನೆಯನ್ನು ನ್ಯಾಯಾಲಯಕ್ಕೆ ನಿಡಿರುವುದಿಲ್ಲ. ಕಂಪ್ಯೂಟರೀಕರಣಗೊಂಡ ದಾಖಲಾತಿಗೆ ಸಂಬಂಧಿಸಿದಂತೆ ನಾವು ಕಲಂ 65ಬಿ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ. ನಾವು ಆರೋಪಿತಳಿಗೆ ಯಾವುದೇ ಸಾಲವನ್ನು ನೀಡಲಿಲ್ಲ ಎಂದರೆ ಸರಿಯಲ್ಲ. ಆರೋಪಿತಳಿಗೆ ಯಾವುದೇ ಸಾಲವನ್ನು ನೀಡದೇ ಇದ್ದರೂ ಸಹ ನಾವು ಭೋಗಸ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ.

2. ಈ ಪ್ರಕರಣಕ್ಕೂ ಆರೋಪಿತಳಿಗುಗ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತಳು ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿತಳು ಫಿಶಯಾದಿ ಸಂಸ್ಥೆಯಲ್ಲಿ ಸಾಲವನ್ನು ಪಡೆದುಕೊಳ್ಳದೇ ಇರುವುದರಿಂದ ಅಕೆಯು ಸದ್ರಿ ಸಾಲವನ್ನು ಮರು ಪಾವತಿಸಲು ಬಾಧ್ಯಸ್ಥಳಲು ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಬಂದು ಸಾಲವನ್ನು ಆರೋಪಿತಳಿಗೆ ನೀಡಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ